ಸರ್ಕಾರಿ ಸುತ್ತೋಲೆ ಸಂ : ಸಿಆಸುಇ (ಬಿಪಿಇ) 123, ಎಸ್‌ಪಿಯು 93ರ ಪ್ರಕಾರ ಯಾವುದೇ ಸಾರ್ವಜನಿಕ ಕ್ಷೇತ್ರದ ಸಂಸ್ಥೆಯು ತುಟ್ಟಿಭತ್ಯೆಯ ಹೆಚ್ಚಳವನ್ನು ಈ ಕೆಳಕಂಡ ಸನ್ನಿವೇಶದಲ್ಲಿ ಮಾಡಬಹುದಾಗಿದೆ :

ಅ) ಸಂಬಂಧಪಟ್ಟ ಸಂಸ್ಥೆಯು ಸರ್ಕಾರಿ ತುಟ್ಟಿಭತ್ಯೆಯನ್ನು ಅನುಸರಿಸಲು ಸಹಮತಿಸಲ್ಪಟ್ಟಿರಬೇಕು.

ಆ) ಸಂಸ್ಥೆಯು, ಸರ್ಕಾರದಿಂದ ಯಾವುದೇ ಆರ್ಥಿಕ ನೆರವನ್ನೂ ಕೋರದೆ, ತನ್ನ ಸ್ವಂತ ಸಂಪನ್ಮೂಲಗಳಿಂದ ತುಟ್ಟಿಭತ್ಯೆಯ ಹೆಚ್ಚಳದ ಖರ್ಚನ್ನು ಭರಿಸುವ ಸ್ಥಿತಿಯಲ್ಲಿರಬೇಕು.

ಇ) ಕಂಪನಿಯ ನಿರ್ದೇಶಕ ಮಂಡಳಿಯು ತುಟ್ಟಿಭತ್ಯೆಯ ಹೆಚ್ಚಳವನ್ನು ಅಂಗೀಕರಿಸಿರಬೇಕು.

ಈ) ಹೆಚ್ಚುವರಿ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಮೊದಲು ನಿರ್ದೇಶಕ ಮಂಡಳಿಯು ಇದರಿಂದಾಗಿ ಕಂಪನಿಯ ಸಂಪನ್ಮೂಲಗಳಿಗೆ ಹಾನಿಯನ್ನು ಉಂಟುಮಾಡುತ್ತದೆಯೇ ಎಂಬುದನ್ನು ಪರಿಗಣಿಸಬೇಕು. ಹೆಚ್ಚುವರಿ ತುಟ್ಟಿಭತ್ಯೆಯ ಮಂಜೂರಾತಿಯಿಂದಾಗಿ ಕಂಪನಿಯ ಉತ್ಪಾದನಾ ಸಾಮರ್ಥ್ಯಕ್ಕೆ ಮತ್ತು ಆರ್ಥಿಕ ಸ್ಥಿತಿಗೆ ಯಾವುದೇ ರೀತಿಯಲ್ಲೂ ಧಕ್ಕೆ ಉಂಟುಮಾಡದು ಎಂಬುದು ನಿರ್ದೇಶಕ ಮಂಡಳಿಗೆ ಮನವರಿಕೆ ಆದರೆ ಮಾತ್ರ ಅದು ಹೆಚ್ಚುವರಿ ತುಟ್ಟಿಭತ್ಯೆಯನ್ನು ಮಂಜೂರು ಮಾಡಬೇಕು.

ಕಂಪನಿಯ ಆರ್ಥಿಕ ಮುಗ್ಗಟ್ಟಿನಿಂದಾಗಿ ಹಾಗೂ ದಿನಾಂಕ: 31–3–2011ರ ವೇಳೆಗೆ ಕಂಪನಿಯ ಸಂಚಿತ ನಷ್ಟವು ರೂ.200–00 ಕೋಟಿಗಳನ್ನು ದಾಟುವ ನಿರೀಕ್ಷೆ ಇರುವ ಕಾರಣ, ಸರ್ಕಾರವು ದಿನಾಂಕ : 1–7–2010ರಿಂದ ಘೋಷಿಸಿರುವ ಹೆಚ್ಚುವರಿ ಶೇ. 10.25ರ ತುಟ್ಟಿಭತ್ಯೆಯನ್ನು (ಕಳೆದ ಎಂಟು ತಿಂಗಳ ತುಟ್ಟಿ ಭತ್ಯೆಯ ಹೊರೆಯು ರೂ. 2.80 ಕೋಟಿಗಳು) ಕಂಪನಿಗೆ ನೀಡಲು ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿ, ಕಂಪನಿಯು ಹೆಚ್ಚುವರಿ ತುಟ್ಟಿಭತ್ಯೆಯ ನೀಡಿಕೆಯ ಬಗ್ಗೆ ಸರ್ಕಾರಕ್ಕೆ ನೆರವು ಹಾಗೂ ಆದೇಶಗಳಿಗಾಗಿ ಸಂಪರ್ಕಿಸಿದ್ದು, ಸರ್ಕಾರ ಕಂಪನಿಯ ಕೋರಿಕೆಯನ್ನು ತಿರಸ್ಕರಿಸಿದೆ.

ಅಸಂಘಟಿತ ಕಾರ್ಮಿಕರ ಕಲ್ಯಾಣ

790(517) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಕಾರ್ಮಿಕ ಕಲ್ಯಾಣ ಕುರಿತು ಭದ್ರತಾ ಯೋಜನೆ ಇನ್ನಿತರ ರಕ್ಷಣೆ ನೀಡುವ ಕಾಯ್ದೆ ಜಾರಿ ಮಾಡಲು ಸರ್ಕಾರ ತೆಗೆದುಕೊಂಡಿರುವ ನಿಲುವೇನು ;

ಆ) ಅಸಂಘಟಿತ ಕಾರ್ಮಿಕರ ಕಲ್ಯಾಣದ ಬಗ್ಗೆ ಸರ್ಕಾರ ಒಂದು ಹೊಸ ಕಾಯ್ದೆ ತರಲು ಉದ್ದೇಶಿಸಿರುವುದು ನಿಜವೇ ;

ಇ) ಹಾಗಿದ್ದಲ್ಲಿ, ಈ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಗುವುದು ಹಾಗೂ ಯೋಜಿತ ಭದ್ರತೆಗಳು ಯಾವುವು ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಅಧಿನಿಯಮ 2008ನ್ನು ಜಾರಿಗೆ ತರುವ ಸಲುವಾಗಿ ಕರ್ನಾಟಕ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ (ಕರ್ನಾಟಕ) ನಿಯಮಗಳು 2009ನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿ, ಈ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ನಿರ್ಧರಿಸಿರುತ್ತದೆ.

ಆ) ಇಲ್ಲ. ಮೇಲೆ ಹೇಳಿದಂತೆ ಕೇಂದ್ರ ಕಾಯ್ದೆ ಅಡಿ ಅಧಿನಿಯಮವನ್ನು ರಚಿಸಲಾಗಿದೆ.

ಇ) ಈ ಯೋಜನೆಯನ್ನು ಜಾರಿಗೆ ತರಲು ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಲಾಗಿದೆ. ಪ್ರಾರಂಭಿಕವಾಗಿ ದರ್ಜಿ, ದೋಬಿ, ಹಮಾಲರು, ಖಾಸಗಿ ಹೋಟೆಲ್ ಕಾರ್ಮಿಕರು, ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು, ಆಟೋಮೊಬೈಲ್ ವರ್ಕ್ ಶಾಪ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪ್ರಸ್ತುತ, ಈ ಆರು ವಲಯದ ಕಾರ್ಮಿಕರಿಗೆ ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಹೊಸ ಪಿಂಚಣಿ ಯೋಜನೆ ಸ್ವಾವಲಂಭನ್ ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

Labour Department closure of Idel Jawa Factory at Mysore

794(1106) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

a) Whether it has come to the notice of the Government regarding the closure of Ideal JAWA factory at Mysore ; (Details be furnished) ;

b) If so, Whether the Management has obtain permission for its closure ; (Details be furnished) ;

c) Whether the statutory claims of the workers are settled ; (Details be furnished) ;

d) Present status be informed ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಹೌದು, ಕಂಪನಿಯನ್ನು ಮುಚ್ಚುವ ಬಗ್ಗೆ ಕಂಪನಿ ಕಾಯ್ದೆಯಡಿ ದಿನಾಂಕ : 17-08-2001 ರಂದು ಆದೇಶವಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ಅಫಿಷಿಯಲ್ ಲಿಕ್ವಿಡೇಟರ್ ಅನ್ನು ನೇಮಿಸಲು ಆದೇಶ ಮಾಡಿರುತ್ತದೆ.

ಆ) ಕೈಗಾರಿಕಾ ವಿವಾದ ಕಾಯ್ದೆ 1947ರಡಿ ಯಾವುದೇ ಅನುಮತಿ ನೀಡಿರುವುದಿಲ್ಲ.

ಇ) ಅಂಗೀಕೃತ ಮೊತ್ತದ 25%ರಷ್ಟು ಪರಿಹಾರ ಧನವನ್ನು ವಿತರಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ರೂ. 26.70 ಕೋಟಿ ಮೊತ್ತವನ್ನು ಕಾರ್ಮಿಕರಿಗೆ ವಿತರಿಸಲಾಗಿದೆ.

ಈ) ಸಂಸ್ಥೆಯ ಜಾಗವನ್ನು ಮಾರಾಟ ಮಾಡಲಾಗಿದೆ.